ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ584133, ರಾಯಚೂರು, ಕರ್ನಾಟಕ, ಭಾರತ

ಆಡಳಿತ Email: registrarrur@gmail.com

ಸಂಖ್ಯೆ: ರಾವಿರಾ/ಆಡಳಿತ/ಸಿಂಡಿಕೇಟ್ ಸಭೆ/ ದಿನಾಂಕ: 06.11.2021

## ಸಿಂಡಿಕೇಟ್ ಸಭೆಯ ಸೂಚನಾ ಪತ್ರ

ವಿಷಯ: ದಿನಾಂಕ 08.11.2021ರಂದು ಬೆಳಿಗ್ಗೆ 11:30 ಗಂಟೆಗೆ ಸಿಂಡಿಕೇಟ್ ಸಭೆಯನ್ನು ಜರುಗಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 06.11.2021.

*****

ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಸಿಂಡಿಕೇಟಿನ ಅಸಮಾನ್ಯ ಸಭೆಯನ್ನು ಸೋಮವಾರ ದಿನಾಂಕ: 08.11.2021 ರಂದು ಬೆಳಿಗ್ಗೆ 11:30 ಗಂಟೆಗೆ ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಕರೆಯಲಾಗಿದೆ. ಕಾರಣ, ತಾವು ಈ ಸಭೆಗೆ ಆಗಮಿಸಬೇಕಾಗಿ ಕೋರಲಾಗಿದೆ.

## ಸಭೆಯ ಕಾರ್ಯಸೂಚಿ

1. ರಾಯಚೂರು ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಶಾಸನ/ಪರಿನಿಯಮಾವಳಿಗಳನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸುವ ಕುರಿತು.
2. ರಾಯಚೂರು ವಿಶ್ವವಿದ್ಯಾಲಯದ ಕಛೇರಿ ವಾಹನವನ್ನು ರಿಪೇರಿ ಮಾಡಿಸುವುದರ ಬಗ್ಗೆ ಅನುಮೋದನೆಗಾಗಿ ಸಲ್ಲಿಸುವ ಕುರಿತು.
3. ರಾಯಚೂರು ವಿಶ್ವವಿದ್ಯಾಲಯದ ಹಣಕಾಸು ವಿಭಾಗಕ್ಕೆ ಸಹಾಯಕ ಕಛೇರಿ ಅಧೀಕ್ಷಕರನ್ನು ತಾತ್ಕಾಲಿಕ/ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ವಿಷಯವನ್ನು ಪರಿಗಣಿಸುವ ಕುರಿತು.
4. ರಾಯಚೂರು ವಿಶ್ವವಿದ್ಯಾಲಯದ ಹಣಕಾಸು ವಿಭಾಗಕ್ಕೆ ಆಪ್ತ ಸಹಾಯಕರನ್ನು ತಾತ್ಕಾಲಿಕ/ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ವಿಷಯವನ್ನು ಪರಿಗಣಿಸುವ ಕುರಿತು.
5. ರಾಯಚೂರು ವಿಶ್ವವಿದ್ಯಾಲಯದ ಕುಲಪತಿಗಳ/ಕುಲಸಚಿವರ/ ಕುಲಸಚಿವರು (ಮೌಲ್ಯಮಾಪನ)/ಹಣಕಾಸು ಸಚಿವಾಲಯ/ಕಾಲೇಜು ಅಭಿವೃದ್ಧಿ ಮಂಡಳಿ ಸೇರಿದಂತೆ ದೈನಂದಿನ ಆಡಳಿತಾತ್ಮಕ ಅತೀತುರ್ತು ಕೆಲಸಗಳಿಗಾಗಿ ಅತ್ಯವಶ್ಯಕ ಬೋಧಕೇತರ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳುವ ವಿಷಯವನ್ನು ಪರಿಗಣಿಸುವ ಕುರಿತು.
6. ರಾಯಚೂರು ವಿಶ್ವವಿದ್ಯಾಲಯದ ಬಡ್ಜೆಟ್ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸುವ ಕುರಿತು.
7. ರಾಯಚೂರು ವಿಶ್ವವಿದ್ಯಾಲಯದ ಪರೀಕ್ಷಾ ನಿರ್ವಹಣಾ ವ್ಯವಸ್ಥೆಗೆ ಟೆಂಡರ್ ಕರೆಯಲು ಅನುಮತಿ ಮತ್ತು ಇ-ಆಡಳಿತ ಕಛೇರಿ ಮತ್ತು ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಚಟುವಟಿಕೆಗಳ ಬಗ್ಗೆ ಪರಿಗಣಿಸುವ ಕುರಿತು.
8. ಮಾನ್ಯ ಕುಲಪತಿಗಳ ಅಪ್ಪನೆಯ ಮೇರೆಗೆ ಇನ್ನಿತರ ವಿಷಯಗಳ ಬಗ್ಗೆ ಚರ್ಚೆ.

6/11/21

(ಪ್ರೊ. ವಿಶ್ವನಾಥ ಎಂ.)
ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

ಗೆ,

ಮಾನ್ಯ ಕುಲತಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

**ರಾಯಚೂರು ವಿಶ್ವವಿದ್ಯಾಲಯ**

ರಾಯಚೂರು ಯೆರಗೇರಾ-584 133, ಕರ್ನಾಟಕರಾಜ್ಯ, ಭಾರತ

**ಆಡಳಿತ ವಿಭಾಗ** E-mail: registrarrur@gmail.com

ಕ್ರ.ಸಂ. ರಾವಿರಾ/ಸಿಂಡಿಕೇಟ್/ಸಾ.ಸಭೆ/2020-21/ ದಿನಾಂಕ: 11.11.2021

ಗೆ,

ಮಾನ್ಯ ಕುಲಪತಿಗಳು,
ರಾಯಚೂರು ವಿಶ್ವವಿದ್ಯಾಲಯ,
ಯರಗೇರಾ, ರಾಯಚೂರು-584133

ಮಾನ್ಯರೇ,

ವಿಷಯ: ದಿನಾಂಕ: 08.11.2021ರಂದು ಬೆಳಿಗ್ಗೆ 11.30ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯಸಭೆಯನಡವಳಿಗಳನ್ನುಕಳುಹಿಸುವಕುರಿತು.

***

ದಿನಾಂಕ: 08.11.2021ರಂದು ಬೆಳಿಗ್ಗೆ 11.30 ಗಂಟೆಗೆ, ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ಸಿಂಡಿಕೇಟ ಸಾಮಾನ್ಯ ಸಭೆಯ ನಡವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮಗೆ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,

11/11/21

**(ಪ್ರೊ. ವಿಶ್ವನಾಥ ಎಂ.,)**
**ಕುಲಸಚಿವರು,**
**ರಾಯಚೂರು ವಿಶ್ವವಿದ್ಯಾಲಯ,**
**ರಾಯಚೂರು.**

ಅಡಕ: ಸಿಂಡಿಕೇಟ್ ನಡವಳಿಗಳು

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560 001.
2. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣಇಲಾಖೆ (ವಿಶ್ವವಿದ್ಯಾಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001
3. ಕುಲಸಚಿವರು (ಮೌಲ್ಯಮಾಪನ), ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
4. ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
6. ಉಪ ಗ್ರಂಥಪಾಲಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
7. ಉಪ ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
8. ನೋಡಲ್ ಅಧಿಕಾರಿ, ಇ-ಗವರ್ನನ್ಸ್, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
9. ಕುಲಪತಿಗಳ ಆಪ್ತಕಾಯದರ್ಶಿ/ ಕುಲಪತಿಗಳ ಆಪ್ತಸಹಾಯಕ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
10. ಕಚೇರಿ ಕಡತಕ್ಕೆ.

## <u>ಸಿಂಡಿಕೇಟ್ ಸಭೆಯ ನಡವಳಿಗಳು</u>

ದಿನಾಂಕ: 08.11.2021 ರಂದು ಬೆಳಿಗ್ಗೆ 11.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

### <u>ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು</u>

1. ಪ್ರೊ. ಹರೀಶ್ ರಾಮಸ್ವಾಮಿ, ಮಾನ್ಯ ಕುಲಪತಿಗಳು – ಅಧ್ಯಕ್ಷರು
2. ಪ್ರೊ. ಯರಿಸ್ವಾಮಿ ಎಂ., ಕುಲಸಚಿವರು (ಮೌಲ್ಯಮಾಪನ) – ಸದಸ್ಯರು
3. ಪ್ರೊ. ಪಾರ್ವತಿ ಸಿ.ಎಸ್., ಹಣಕಾಸು ಅಧಿಕಾರಿಗಳು – ಸದಸ್ಯರು (invited)
4. ಪ್ರೊ. ವಿಶ್ವನಾಥ ಎಂ., ಕುಲಸಚಿವರು – ಸದಸ್ಯ ಕಾರ್ಯದರ್ಶಿಗಳು

ಮೊದಲನೇಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಸ್ವಾಗತಿಸುತ್ತಾ ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಬವಾಯಿತು.

| ಕಲಂ/ ಐಟಂ ನಂ. | ವಿಷಯ | ಸಿಂಡಿಕೇಟ್ ನಿರ್ಣಯ |
|---|---|---|
| 1. | ರಾಯಚೂರು ವಿಶ್ವವಿದ್ಯಾಲಯವು ಸರ್ಕಾರದ ಅಧಿಸೂಚನೆಯಂತೆ ದಿನಾಂಕ 01.08.2020ರಂದು ನೂತನವಾಗಿ ಅಸ್ತಿತ್ವಕ್ಕೆ ಬಂದಿದ್ದು, ತನ್ನ ಶೈಕ್ಷಣಿಕ ಚಟುವಟಿಕೆಗಳನ್ನು 2021-22ನೇ ಸಾಲಿನಿಂದ ಪ್ರಾರಂಬಿಸಿದೆ. ರಾಯಚೂರು ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಹಿಂದಿನ 17 ಸ್ನಾತಕೋತ್ತರ ಪದವಿ/ ಕೋರ್ಸಗಳು ಕಾರ್ಯನಿರ್ವಹಿಸುತ್ತಿದ್ದು ಇನ್ನು 8 ಹೊಸ ಸ್ನಾತಕೋತ್ತರ ಪದವಿ/ಕೋರ್ಸಗಳನ್ನು 2021-22 ನೇ ಶೈಕ್ಷಣಿಕ ಸಾಲಿಗೆ ಪ್ರಾರಂಬಿಸಿದೆ. ಪ್ರಸ್ತುತ ರಾಯಚೂರು ವಿಶ್ವವಿದ್ಯಾಲಯದ ಹಿಂದಿನ ಸ್ನಾತಕೋತ್ತರ ಕೇಂದ್ರದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪ್ರಾರಂಬಿಸಲ್ಪಟ 17 ಸ್ನಾತಕೋತ್ತರ ಅಧ್ಯಯನ ವಿಭಾಗಗಳಿದ್ದು, ಅದರಲ್ಲಿ ಕನ್ನಡ ಮತ್ತು ಉಪಕರಣಾತ್ಮಕ ತಂತ್ರಜ್ಞಾನ ಸ್ನಾತಕೋತ್ತರ ಅಧ್ಯಯನ ವಿಭಾಗಗಳನ್ನು ಹೊರತು ಪಡಿಸಿ ಇನ್ನುಳಿದ ಯಾವುದೇ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪರಿನಿಯಮಾವಳಿ/ ಶಾಸನಗಳನ್ನು ರಚನೆಯಾಗಿರುವದಿಲ್ಲ. ಕಾರಣ, ರಾಯಚೂರು ವಿಶ್ವವಿದ್ಯಾಲಯವು ಈಗಾಗಲೇ ಲಭ್ಯವಿರುವ 17 ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಹಾಗೂ ಹೊಸ 15 ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ (ಕಲಾ ನಿಕಾಯ, ಸಾಮಾಜ ವಿಜ್ಞಾನ ನಿಕಾಯ, ವಾಣಿಜ್ಯ ನಿಕಾಯ, ಶಿಕ್ಷಣ ನಿಕಾಯ, ಮತ್ತು ವಿಜ್ಞಾನ ನಿಕಾಯಗಳ ಒಟ್ಟು 31 ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಹಾಗೂ ತಾಂತ್ರಿಕ ಕೌಶಲ್ಯ ತರಬೇತಿ ಕೇಂದ್ರ ಸೇರಿದಂತೆಒಟ್ಟು 32 ವಿಭಾಗಳಿಗೆ) ಯು.ಜಿ.ಸಿ. ನಿಯಮಾನುಸಾರ ಪರಿನಿಯಮಾವಳಿ/ಶಾಸನ (Statute) ಗಳನ್ನು ಹೊಸದಾಗಿ ರಚಿಸಲು ರಾಯಚೂರು ವಿಶ್ವವಿದ್ಯಾಲಯದಿಂದ ಒಂದು ಶಾಸನ ರಚನಾ ಸಮಿತಿ (Statute Framing Committee)ಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಮಾರ್ಚ-2021ರಲ್ಲಿ ಸಭೆ ನಡೆಸಿ ಈ 32 ಅಧ್ಯಯನ ವಿಭಾಗಗಳ ಕರಡು | ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ಒಟ್ಟು 32 ವಿಭಾಗಳಿಗೆ ಯು.ಜಿ.ಸಿ. ನಿಯಮಾನುಸಾರ ಪರಿನಿಯಮಾವಳಿ/ಶಾಸನ (Statute) ಗಳನ್ನು ಒಂದು ಶಾಸನ ರಚನಾ ಸಮಿತಿ (Statute Framing Committee)ಯ ಮುಖಾಂತರ ರಚಿಸಿ ಅದನ್ನು ಮೊದಲ ವಿದ್ಯಾವಿಷಯಕ ಪರಿಷತ್ ಸಮಿತಿಗೆ ಸಲ್ಲಿಸಿ ದಿನಾಂಕ: 08.11.2021 ರಂದು ಬೆಳಿಗ್ಗೆ 11.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಿ ಎಲ್ಲಾ 32 ಅಧ್ಯಯನ ವಿಭಾಗಗಳಿಗೆ ಯು.ಜಿ.ಸಿ. ನಿಯಮಾನುಸಾರ ಪರಿನಿಯಮಾವಳಿ/ಶಾಸನಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯಿಂದ ಅನುಮೋದನೆಯನ್ನು ಪಡೆದುಕೊಂಡು ನಂತರ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ಇದನ್ನು ಅನುಮೋದಿಸಿತು. |

| | | |
|---|---|---|
| | ಪರಿನಿಯಮಾವಳಿ/ ಶಾಸನಗಳನ್ನು ಸಿದ್ದಪಡಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿತ್ತು. ಮುಂದುವರೆದು, ಸರ್ಕಾರದ ನಿರ್ದೇಶನದಂತೆ ರಾಷ್ಟ್ರೀಯ ಶಿಕ್ಷಣ ನೀತಿ(NEP-2020)ಯನ್ನು ವಿಶ್ವವಿದ್ಯಾಲಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಈ 32 ಅಧ್ಯಯನ ವಿಭಾಗಗಳ ಪರಿನಿಯಮಾವಳಿ/ ಶಾಸನ (Statute) ಗಳನ್ನು ಸಿಂಡಿಕೇಟ್‌ನಲ್ಲಿ ಚರ್ಚಿಸಿ ಒಪ್ಪಿಗೆ ಪಡೆಯಲು ನಿರ್ಧರಿಸಲಾಯಿತು. | |
| 2. | ರಾಯಚೂರು ವಿಶ್ವವಿದ್ಯಾಲಯದ ಕಛೇರಿ ವಾಹನವನ್ನು ರಿಪೇರಿ ಮಾಡಿಸುವುದರ ಬಗ್ಗೆ ಪ್ರಸ್ತಾವನೆಯನ್ನು ಅನುಮೋದಿಸುವ ವಿಷಯವನ್ನು ಪರಿಗಣಿಸುವ ಕುರಿತು. | ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ನೂತನವಾಗಿ ಸ್ಥಾಪಿತವಾಗಿರುವ ರಾಯಚೂರು ವಿಶ್ವವಿದ್ಯಾಲಯಕ್ಕೆ ಸರ್ಕಾರದ ವಿಧಾನಸಭೆಯ ಹಳೆಯ ವಾಹನವನ್ನು ರಾಯಚೂರು ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಲಾಗಿತ್ತು, ಸದರಿ ವಾಹನವು (ವಾಹನ ಸಂಖ್ಯೆ: ಕೆ.ಎ-01 ಜಿ 4929) ತುಂಬಾ ಹಳೆಯದಾಗಿರುವುದರಿಂದ ವಾಹನವನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಸೂಚನೆಯಂತೆ ಕಛೇರಿ ವಾಹನ ರಿಪೇರಿ ಮೆ. ಶೋಧಾ ಮೋಟರ್ಸ್ ಪ್ರೈ.ಲಿ., ಹುಬ್ಬಳ್ಳಿ ಇವರಿಂದ ರಿಪೇರಿಯ ಅಂದಾಜು ಮೊತ್ತದ ಪಟ್ಟಿಯನ್ನು ಪಡೆಯಲಾಗಿದೆ. ಸದರಿ ವಾಹನದ ರಿಪೇರಿಗೆ ಅಂದಾಜು ರೂ. 4-5 ಲಕ್ಷದವರೆಗೆ ಆಗಬಹುದು ಎಂದು ತಿಳಿಸಿರುತ್ತಾರೆ. ಸದರಿ ವಾಹನಕ್ಕೆ ರಿಪೇರಿ ಮಾಡಿಸುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಅನುಮೋದಿಸಿತು. |
| 3. | ರಾಯಚೂರು ವಿಶ್ವವಿದ್ಯಾಲಯದ ಹಣಕಾಸು ವಿಭಾಗಕ್ಕೆ ಸಹಾಯಕ ಕಛೇರಿ ಅಧೀಕ್ಷಕರನ್ನಾಗಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುವ ವಿಷಯವನ್ನು ಪರಿಗಣಿಸುವ ಕುರಿತು. | ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ನೂತನವಾಗಿ ಸ್ಥಾಪಿತವಾದ ರಾಯಚೂರು ವಿಶ್ವವಿದ್ಯಾಲಯಕ್ಕೆ ಹಲಾವಾರು ಉದ್ಯೋಗಕಾಂಕ್ಷಿಗಳು ತಮ್ಮ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಹಾಗೆಯೇ ಶ್ರೀ. ಗುರುರಾಜ ಕುಲಕರ್ಣಿ, ಸಹಾಯಕ ಕಛೇರಿ ಅಧೀಕ್ಷಕ, ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುತ್ತಾರೆ. ಸದರಿಯವರು ರಾಯಚೂರು ವಿಶ್ವವಿದ್ಯಾಲಯದ ಹಣಕಾಸು ವಿಭಾಗಕ್ಕೆ ಕಾರ್ಯನಿರ್ವಹಿಸಲು ಇಚ್ಛಿಸಿದ್ದು, ಮಾನ್ಯ ಕುಲಪತಿಯವರ ಅಧಿಕಾರದಡಿ ಹಾಗೂ ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರು, ಮಾನ್ಯ ಕುಲಪತಿಗಳಿಗೆ ನೀಡಿರುವ ಆದೇಶದನ್ವಯ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ 56(1) ಕಲಂ ಪ್ರಕಾರ ಶ್ರೀ. ಗುರುರಾಜ ಕುಲಕರ್ಣಿ, ಸಹಾಯಕ ಕಛೇರಿ ಅಧೀಕ್ಷಕರೆಂದು ತಾತ್ಕಾಲಿಕವಾಗಿ ದಿನಾಂಕ: 01.07.2021ರಿಂದ ಪೂರ್ವಾನ್ವಯವಾಗುವಂತೆ 11ತಿಂಗಳು ಅಥವಾ ಮುಂದಿನ ಆದೇಶದವರೆಗೆ ಕಾರ್ಯನಿರ್ವಹಿಸಲು ಮತ್ತು ಪ್ರತಿ ತಿಂಗಳಿಗೆ ರೂ. 18,000/- ಮಾಸಿಕ ಸಂಚಿತ ವೇತನ ನಿಗದಿಪಡಿಸಿ ಆದೇಶವನ್ನು ಹೊರಡಿಸಲು ಸಿಂಡಿಕೇಟ್ ಅನುಮೋದಿಸಿತು. |
| 4. | ರಾಯಚೂರು ವಿಶ್ವವಿದ್ಯಾಲಯದ ಹಣಕಾಸು ವಿಭಾಗಕ್ಕೆ ಆಪ್ತ ಸಹಾಯಕ ಹುದ್ದೆಗೆ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುವ ವಿಷಯವನ್ನು ಪರಿಗಣಿಸುವ ಕುರಿತು. | ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ನೂತನವಾಗಿ ಸ್ಥಾಪಿತವಾದ ರಾಯಚೂರು ವಿಶ್ವವಿದ್ಯಾಲಯಕ್ಕೆ ಹಲಾವಾರು ಉದ್ಯೋಗಕಾಂಕ್ಷಿಗಳು ತಮ್ಮ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಹಾಗೆಯೇ ಶ್ರೀ. ಸಿ. ನಾಗರಾಜ್, ರಾಯಚೂರು ಇವರು ಕೇಂದ್ರ ಸರ್ಕಾರ/ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ. ಸದರಿಯವರು ರಾಯಚೂರು ವಿಶ್ವವಿದ್ಯಾಲಯದ ಹಣಕಾಸು ವಿಭಾಗಕ್ಕೆ ಕಾರ್ಯನಿರ್ವಹಿಸಲು ಇಚ್ಛಿಸಿದ್ದು, ಮಾನ್ಯ ಕುಲಪತಿಯವರ ಅಧಿಕಾರದಡಿ ಹಾಗೂ ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರು, ಮಾನ್ಯ ಕುಲಪತಿಗಳಿಗೆ ನೀಡಿರುವ ಆದೇಶದನ್ವಯ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ 56(1) ಕಲಂ ಪ್ರಕಾರ ಶ್ರೀ ಸಿ. ನಾಗರಾಜ್, ಆಪ್ತ ಸಹಾಯಕರೆಂದು |

| | | |
|---|---|---|
| | | ಕಾರ್ಯನಿರ್ವಹಿಸಲು ತಾತ್ಕಾಲಿಕವಾಗಿ ದಿನಾಂಕ 01.07.2021ರಿಂದ ಪೂರ್ವಾನ್ವಯವಾಗುವಂತೆ 11ತಿಂಗಳು ಅಥವಾ ಮುಂದಿನ ಆದೇಶದವರೆಗೆ ಕಾರ್ಯನಿರ್ವಹಿಸಲು ಮತ್ತು ಪ್ರತಿ ತಿಂಗಳಿಗೆ ರೂ. 18,000/– ಮಾಸಿಕ ಸಂಚಿತ ವೇತನ ನಿಗದಿಪಡಿಸಿ ಆದೇಶವನ್ನು ಹೊರಡಿಸಲು ಸಿಂಡಿಕೇಟ್ ಅನುಮೋದಿಸಿತು. |
| 5. | ➢ ರಾಯಚೂರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ/ ಕುಲಸಚಿವರ/ಕುಲಸಚಿವರು (ಮೌಲ್ಯಮಾಪನ)/ ಕಾಲೇಜು ಅಭಿವೃದ್ಧಿ ಮಂಡಳಿ ಸೇರಿದಂತೆ ದೈನಂದಿನ ಆಡಳಿತಾತ್ಮಕ ಅತೀ ತುರ್ತು ಕೆಲಸಗಳಿಗಾಗಿ ಅತ್ಯವಶ್ಯಕ ಬೋಧಕೇತರ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಕಾರ್ಯನಿವಸಲು ವಿಷಯವನ್ನು ಪರಿಗಣಿಸುವ ಕುರಿತು.<br>➢ ದಿನಾಂಕ: 09.02.2021ರಂದು ಸಿಂಡಿಕೇಟ್ ಸಭೆಯಲ್ಲಿ ಐಟಂ ಸಂಖ್ಯೆ: 06 ಅನ್ನು ಸಿಂಡಿಕೇಟ್ ಅನುಮೋದಿಸಿದ 03 ಸಿಬ್ಬಂದಿಗಳ ಅವಧಿಯನ್ನು ವಿಸ್ತರಿಸುವ ವಿಷಯವನ್ನು ಪರಿಗಣಿಸುವ ಕುರಿತು. | ➢ ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ನೂತನವಾಗಿ ಸ್ಥಾಪಿತವಾದ ರಾಯಚೂರು ವಿಶ್ವವಿದ್ಯಾಲಯಕ್ಕೆ ಅತ್ಯವಶ್ಯಕವಾಗಿ ಬೋಧಕೇತರ ತಾತ್ಕಾಲಿಕ ಸಿಬ್ಬಂದಿಗಳನ್ನು ವಿದ್ಯಾರ್ಹತೆ, ಅನುಭವದ ಅನುಗುಣವಾಗಿ ಮಾಸಿಕ ಸಂಚಿತ ವೇತನವನ್ನು ನಿಗಧಿಪಡಿಸಿ 07 ಸಿಬ್ಬಂದಿಗಳನ್ನು ಮಾನ್ಯ ಕುಲಪತಿಯವರ ಅಧಿಕಾರದಡಿ ಹಾಗೂ ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರು, ಮಾನ್ಯ ಕುಲಪತಿಗಳಿಗೆ ನೀಡಿರುವ ಆದೇಶದನ್ವಯ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ 56(1) ಕಲಂ ಪ್ರಕಾರ ಕಾರ್ಯನಿರ್ವಹಿಸಲು ತಾತ್ಕಾಲಿಕವಾಗಿ ಕಛೇರಿ ಕರ್ತವ್ಯಕ್ಕೆ ಕಾರ್ಯನಿರ್ವಹಿಸಿದ ದಿನಾಂಕದಿಂದ ಪೂರ್ವಾನ್ವಯವಾಗುವಂತೆ 11ತಿಂಗಳು ಅಥವಾ ಮುಂದಿನ ಆದೇಶದವರೆಗೆ ಕಾರ್ಯನಿರ್ವಹಿಸಲು ಮತ್ತು ನಿಗದಿಪಡಿಸಿದ ಮಾಸಿಕ ಸಂಚಿತ ವೇತನ ಸದರಿಯವರಿಗೆ ಪಾವತಸಲು ಹಾಗೂ ಆದೇಶವನ್ನು ಹೊರಡಿಸಲು ಸಿಂಡಿಕೇಟ್ ಅನುಮೋದಿಸಿತು.<br>➢ ದಿನಾಂಕ: 09.02.2021ರಂದು ಸಿಂಡಿಕೇಟ್ ಸಭೆಯಲ್ಲಿ ಐಟಂ ಸಂಖ್ಯೆ: 06 ಅನ್ನು ಸಿಂಡಿಕೇಟ್ ಅನುಮೋದಿಸಿದ 03 ಸಿಬ್ಬಂದಿಗಳ ಅವಧಿಯನ್ನು ಮುಂದಿನ 11ತಿಂಗಳು ಅಥವಾ ಮುಂದಿನ ಆದೇಶದವರೆಗೆ ಕಾರ್ಯನಿರ್ವಹಿಸಲು ಸಿಂಡಿಕೇಟ್ ಅನುಮೋದಿಸಿತು. |
| 6. | ರಾಯಚೂರು ವಿಶ್ವವಿದ್ಯಾಲಯದ ಬಡ್ಜೆಟ್ ಪ್ರಸ್ತಾವನೆಯನ್ನು ಅನುಮೋದನೆಯ ಬಗ್ಗೆ ನಿರ್ಣಯಿಸುವ ಪ್ರಸ್ತಾವನೆಯನ್ನು ಅನುಮೋದಿಸುವ ವಿಷಯವನ್ನು ಪರಿಗಣಿಸುವ ಕುರಿತು. | ನೂತನವಾಗಿ ಸ್ಥಾಪಿತವಾಗಿರುವ ರಾಯಚೂರು ವಿಶ್ವವಿದ್ಯಾಲಯವು, 2021–22 ಮತ್ತು 2022–23ನೇ ಸಾಲಿನ ಬಡ್ಜೆಟ್ ಪ್ರಸ್ತಾವನೆಯನ್ನು ತಯಾರಿಸಲು ಸಿಂಡಿಕೇಟ್ ಅನುಮೋದಿಸಿತು. |
| 7. | ರಾಯಚೂರು ವಿಶ್ವವಿದ್ಯಾಲಯದ ಪರೀಕ್ಷಾ ನಿರ್ವಹಣಾ ವ್ಯವಸ್ಥೆಗೆ ಟೆಂಡರ್ ಕರೆಯಲು ಅನುಮತಿ ಮತ್ತು ಇ-ಆಡಳಿತ ಕಛೇರಿ ಮತ್ತು ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಚಟುವಟಿಕೆಗಳ ಕುರಿತು ಪ್ರಸ್ತಾವನೆಯನ್ನು ಅನುಮೋದಿಸುವ ವಿಷಯವನ್ನು ಪರಿಗಣಿಸುವ ಕುರಿತು. | ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ನೂತನವಾಗಿ ಸ್ಥಾಪಿತವಾಗಿರುವ ರಾಯಚೂರು ವಿಶ್ವವಿದ್ಯಾಲಯವು, 2021–22ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಪರೀಕ್ಷಾ ನಿರ್ವಹಣಾ ವ್ಯವಸ್ಥೆಗೆ ಟೆಂಡರ್ ಕರೆಯಲು ಅನುಮತಿ ಮತ್ತು ಇ-ಆಡಳಿತ ಕಛೇರಿ ಮತ್ತು ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಚಟುವಟಿಕೆಗಳ ಕುರಿತಂತೆ ನಿರ್ಣಯಿಸುವ ವಿಷಯಗಳನ್ನು ಸಿಂಡಿಕೇಟ್ ಅನುಮೋದಿಸಿತು. |

8/11/21

ಕುಲಸಚಿವರು/ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

8/11/2021.

ಕುಲಪತಿಗಳು/ಅಧ್ಯಕ್ಷರು
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು